ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಸೋಮವಾರ, ದಿನಾಂಕ : 28 ನೇ ಸೆಪ್ಟೆಂಬರ್, 2020

ಕರೋನಾ ಸಾಂಕ್ರಾಮಿಕ (Covid-19) ರೋಗ ಹಬ್ಬುವಿಕೆ ತಡೆಯಲು ವಿನಿಯೋಗಿಸಿದ ಅನುದಾನ ಬಗ್ಗೆ

ಶ್ರೀ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) :-

772 (982) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರ ಮತ್ತು ರಾಜ್ಯದಲ್ಲಿ ಕರೋನಾ ಸಾಂಕ್ರಾಮಿಕ (Covid-19) ರೋಗ ಹಾವಳಿಯನ್ನು ಯಾವಾಗ ಗುರುತಿಸಲಾಯಿತು ; ಈ ವೈರಸ್ ಹರಡುವಿಕೆಯನ್ನು ತಡೆಗಟ್ಟಲು, ವೈರಸ್ ಬಾಧಿತರಿಗೆ ಚಿಕಿತ್ಸೆಯೂ ಸೇರಿದಂತೆ ವಿವಿಧ ಹಂತಗಳಲ್ಲಿ ಕೈಗೊಂಡ ಕ್ರಮಗಳ ಸ್ವರೂಪ ಏನು ; (ವಿವರವಾದ ಸಂಪೂರ್ಣ ಮಾಹಿತಿಯನ್ನು ಪ್ರತ್ಯೇಕವಾಗಿ ಒದಗಿಸುವುದು)

(ಆ) ಕೊರೋನಾ ಸಾಂಕ್ರಾಮಿಕ (Covid-19) ರೋಗದ ಕಾರಣದಿಂದಾಗಿ ಸರ್ಕಾರ ವಿವಿಧ ಯೋಜನೆಗಳು, ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತಂದಿದ್ದು, ಇವುಗಳ ಕುರಿತಾಗಿ ಪ್ರತ್ಯೇಕ ವಿವರ ಮತ್ತು ಈ ಯೋಜನೆ/ಕಾರ್ಯಕ್ರಮಗಳಿಗೆ ವಿವಿಧ ಇಲಾಖೆಗಳ ಮೂಲಕ ವಿನಿಯೋಗಿಸಿದ ಅನುದಾನ ಎಷ್ಟು ; (ಪ್ರತ್ಯೇಕವಾರು ಸಂಪೂರ್ಣ ಮಾಹಿತಿ ಒದಗಿಸುವುದು)

(ಇ) ಕರೋನಾ ಸಾಂಕ್ರಾಮಿಕ (Covid-19) ರೋಗ ನಿಯಂತ್ರಿಸುವಲ್ಲಿ ಸರ್ಕಾರದ ವಿವಿಧ ಇಲಾಖೆಗಳು ಮತ್ತು ಮುಖ್ಯಸ್ಥರ ನಡುವಿನ ಮಾಹಿತಿ ಕೊರತೆ ಮತ್ತು ಸಮನ್ವಯ ಕೊರತೆಯಿಂದಾಗಿ ಆರ್ಥಿಕವಾಗಿ ಹೆಚ್ಚು ಹಾನಿ ಮತ್ತು ವಿನಿಯೋಗಿಸಲಾದ ಹಣದಲ್ಲೂ ಏರುಪೇರಾಗಿರುವ ಗಂಭೀರತೆಯನ್ನು ಸರ್ಕಾರ ಗಮನಿಸಿದೆಯೇ; ಹಾಗಿದ್ದಲ್ಲಿ, ಇಂತಹ ವೆಚ್ಚವನ್ನು ನಿಯಂತ್ರಿಸುವಲ್ಲಿ ವಿಫಲರಾದವರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು ? (ಮಾಹಿತಿ ಒದಗಿಸುವುದು)